ತಾರೀಖು 4ನೇ ಜೂಲೈ 1876.

ನಗರ ಡಿವಿಜ್ಞ ಮುನಸಫರ ಸರ್ಕ್ಯುಟ್ ಕೋರ್ಟುಗಳನ್ನು ಕುರಿತು ಸ್ರ 1875ನೇ ಇಸವಿ ಜೂ 26ನೇ ಮುಕ್ತಂ ಮೈಸೂರು ಗೆಜಿಟ್ 2ನೇ ಭಾಗದ 305ನೇ ಪುಟದಲ್ಲಿ ಫಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮಾಹೆ 11ನೇ ಮುಕ್ತಂ ಇಸ್ತಿಹಾರ್‌ನ್ನು ಕುರಿತು ಸಕಲ ಜನಗಳ ಮತ್ತು ಇದಕ್ಕೆ ಸಂಬಂಧಪಟ್ಟ ಕೋರ್ಟುಗಳ ತಿಳುವಳಿಕೇ ಬಗ್ಯೂ, ನಡವಳಿಕೆ ಬಗ್ಯೂ, ಯಿದರ ದೆಸೇಯಿಂದ ನೋಟಿಸ್ ಕೊಡಲ್ಪಡುವದೇನಂದರೆ.

1ನೇ—ಕಡೂರು ಡಿಸ್ಟ್ರಿಕ್ಟು ಚಿಕ್ಕಮುಗಳೂರು ಮುನಸಫರಿಂದ ಬಾಳೆ ಹೊನ್ನೂರಲ್ಲಿ ಮೇ ಮತ್ತು ನವಂಬರ್ ತಿಂಗಳೊಳಗೆ ಮಾಡಲ್ಪಡುವ ಸರ್ಕ್ಯುಟ್ ಕೋರ್ಟು ಯಿದರ ದೆಸೇಯಿಂದ ಮೌಕೂಫ್ ಮಾಡಲ್ಪಟ್ಟಿರುತ್ತೆ.

2ನೇ—ಕಡೂರು ಮುನಸಫರ ಸರ್ಕ್ಯುಟ್ ಕೋರ್ಟು ಲಕ್ಕುವಳ್ಳಿಗೆ ಬದಲಾಗಿ ತರೀಕೆರೆಯಲ್ಲಿ ಮೇ ಮತ್ತು ನವಂಬರ್ ತಿಂಗಳೊಳಗೆ ಐಯಿಂದಾ ಮಾಡಲ್ಪಡುವದು.

ನಂ. ತಾರೀಖು 3ನೇ ಜೂಲೈ 1876.

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟಿನ ವ್ಯವಹಾರ ವ ನಡವಳಿತ ಈ ವುಗಳನ್ನು ಕ್ರಮಪಡಿಸಲಿಕ್ಕೋಸ್ಕರ ಉಂಟಾದ ರೂಲ್ಸಿನ 39ನೇ ನಿಬಂಧನೆ ಮೈಸೂರು ಶೀಮೆಯ ಜುಡಿಷಲ್ ಕಮ್ಮಿಷನರವರಿಂದ ತಿದ್ದುಪಡಿ ಮಾಡಲ್ಪಟ್ಟಿರುವ ಸಬಬ್ ಸದರೀ ನಿಬಂಧನೆಯನ್ನು ಈ ಕೆಳಗೆ ಕಾಣಿಸಲ್ಪಡುವೆ ಮೇರೆ ಓದಿಕ್ಕೊಳ್ಳತಕ್ಕದ್ದು.

39ನೇ ರೂಲ್—ಕಕ್ಷಿಗಾರರಿಗೆ ಪರಸ್ಪರ ಕೋರ್ಟು ಖರ್ಚನ್ನು ನಿರ್ಣಯಿಸುವಲ್ಲಿ ಮೊಕದ್ದಮೆಯು ಕ್ರಮವಾಗಿ ನಿಯಮಿಸಲ್ಪಟ್ಟ ಪ್ಲೀಡರನ್ನು ಮೊಕರರ್ ಮಾಡಿಕ್ಕೊಳ್ಳಲಿಕ್ಕೆ ತಕ್ಕದ್ದೆಂದು ವಿಚಾರಣೇ ಕಾಲದೊಳಗೆ ಜಡ್ಜಿಯು ಸರ್ಟಿಫೈ ಮಾಡಿದ ಹೊರತು ಯಾವ ರುಸುಂ ಬಗ್ಯೂ ಹುಕ್ಕುಂ ಆಗಲಾರದು. ಹಾಗೆ ಹುಕ್ಕುಂ ಮಾಡಲ್ಪಟ್ಟಲ್ಲಿ ಈ ಕೆಳಗೆ ಕಂಡ ಸ್ಕೇಲ್ ಪ್ರಕಾರ ಫೈಸಲ್ ಮಾಡಲ್ಪಡುವದು.

50	ರೂಪಾಯಿಗಳಿಗೆ	ಮೀರದ	ದಾವೆಗಳಲ್ಲಿ	ರೂಪಾಯಿ	..	..	..	5	0	0
50	,,	ಮೀರಿ	150	ರೂಪಾಯಿಗಳಿಗೆ	ಮೀರದ	ದಾವೆಗಳಲ್ಲಿ	ರೂಪಾಯಿ.	7	8	0
150	,,	,,	300	,,	,,	,,	,,	15	0	0
300	,,	,,	500	,,	,,	,,	,,	20	0	0
500	,,	,,	1000	,,	,,	,,	,,	25	0	0

ವಿಶೇಷ ಸಂದರ್ಭಗಳ ದೆಸೆಯಿಂದ ರುಸುಂ ಕಮ್ಮೀ ಮಾಡಬೇಕಾದ ಆವಶ್ಯಕ ತೋರುವ ಯಾವ ದಾವೆಯಲ್ಲಾಗಲಿ ಹಾಂಗೆ ರುಸುಂ ಕಮ್ಮೀ ಮಾಡುವದು ಜಡ್ಜಿಯವರ ಯಖ್ತ್ಯಾರೀಯಲ್ಲಿರತಕ್ಕದ್ದು.

J. D. GORDON, *Judl. Commr.*

ಪೊಲೀಸ್ ಇಲಾಖಾ.

ತಾರೀಖು 8ನೇ ಜೂಲೈ 1876.

ಹಾಸನ ಡಿಸ್ಟ್ರಿಕ್ಟು ಹಾರ್ನಹಳ್ಳಿ ತಾಲ್ಲೂಕು ಇನ್‌ಸ್ಪೆಕ್ಟರ್ ರಂಗರಾಯರಿಗೆ 1876ನೇ ಇಸವಿ ಜೂ 24ನೇ ಮುಕ್ತಂ ಲಯಿತು 15 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಬಪ್ರೋಜೀಬ್ ಹುಕ್ಕುಂ,"

E. D. GOMPERTZ,
Dy. Inspr. Genl. of Police

ಸರ್ವೇ ವ ಸೆಟಲ್‌ಮೆಂಟ್ ಇಲಾಖಾ.

ತಾರೀಖು 6ನೇ ಜೂಲೈ 1876.

ಸ್ರ 1876ನೇ ಇಸವಿ ಜೂ 24ನೇ ಮುಕ್ತಂ ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮ 22ನೇ ಮುಕ್ತಂ 102ನೇ ನಂಬರ್ ಜೀವ್ ಕಮ್ಮಿಷನರವರ ಇಸ್ತಿಹಾರ್ ಪ್ರಕಾರ ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪ ಟೆಂಡೆಂಟ್ ಕೆಪ್ಟನ್ ಕಾಸ್ ಮೇಕರ್‌ಯವರಿಗೆ ಕೊಡಲ್ಪಟ್ಟ ಒಂದು ತಿಂಗಳ ಪ್ರಿವ್ಯೇರೇಟರಿ ರಜಾವನ್ನು ಸದರೀ ಆಫೀಸರರು 1876ನೇ ಇಸವಿ ಜೂ 23ನೇ ಮುಕ್ತಂ ಮಧ್ಯಾನ್ಹಾತ್ಪರ ಉಪಯೋಗಿಸಿಕ್ಕೊಂಡರು.

J. P. GRANT,
Offg. S. S. Commr., Mysore